**IN THE MEDIA**

ಪ್ರಜಾವಾಣಿ

Thursday, August 13th , 2009

# ಸಿಂಗಪುರಕ್ಕೆ ಜೈನ್ ತಂಡ



ಚಾರ್ಟರ್ಡ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಅಕೌಂಟ್ಸ್ (ಸಿಐಎಂಎ) ನಡೆಸಿದ ರಾಷ್ಟ್ರಮಟ್ಟದ ಗ್ಲೋಬಲ್ ಬಿಸಿನೆಸ್ ಚಾಲೆಂಜ್‌ನ ರಾಷ್ಟ್ರೀಯ ಸುತ್ತಿನಲ್ಲಿ ನಗರದ ಜೈನ್ ಕಾಲೇಜಿನ ತಂಡ ಸಿಎಂಎಸ್ ವಿಜೇತ ತಂಡವಾಗಿ ಆಯ್ಕೆಗೊಂಡಿದೆ. ಈ ಮೂಲಕ ಸಿಂಗಪುರದಲ್ಲಿ ನಡೆಯಲಿರುವ ವಿಶ್ವ ಮಟ್ಟದ ಸುತ್ತಿಗೆ ಆಯ್ಕೆಯಾಗಿದೆ.

ಆರು ತಂಡಗಳು ರಾಷ್ಟ್ರೀಯ ಮಟ್ಟದ ಕೊನೆಯ ಸುತ್ತಿನಲ್ಲಿ ಭಾಗವಹಿಸಿದ್ದು ಕ್ರೈಸ್ಟ್ ಕಾಲೇಜಿನ ಪೋಸ್‌ಡನ್ ತಂಡ ಪ್ರಥಮ ರನ್ನರ್ಸ್ ಅಪ್ ಪ್ರಶಸ್ತಿ ಪಡೆಯಿತು.

ಗೀತ್ ಶೆಟ್ಟಿ, ವರುಣ್ ಖೋನಾ, ಸುರೇನ್ ಸುಲ್ತಾನಿಯಾ ಮತ್ತು ಮನಂತ್ ಮಹೇಶ್ವರಿ ಒಳಗೊಂಡಿರುವ ಸಿಎಂಎಸ್ ತಂಡ ಸಿಂಗಪುರದ ನ್ಯಾಷನಲ್ ಯೂನಿವರ್ಸಿಟಿ ಆಫ್ ಸಿಂಗಪುರದಲ್ಲಿ ಆ. 20ರಂದು ನಡೆಯಲಿರುವ ಅಂತಿಮ ಸುತ್ತಿನಲ್ಲಿ ಇಂಗ್ಲೆಂಡ್, ಶ್ರೀಲಂಕಾ, ಐರ್ಲೆಂಡ್, ಹಾಂಕಾಂಗ್, ಸಿಂಗಪುರ, ಚೀನ, ಮಲೇಷ್ಯಾ ಸೇರಿದಂತೆ ಇತರ ರಾಷ್ಟ್ರಗಳ ರಾಷ್ಟ್ರೀಯ ವಿಜೇತರೊಂದಿಗೆ ಸೆಣಸಾಡಲಿದೆ.

ಮ್ಯಾನೇಜ್‌ಮೆಂಟ್ ಅಕೌಂಟೆಂಟ್ಸ್‌ಗಳ ಜಾಗತಿಕ ಮಟ್ಟದ ಪ್ರಮುಖ ಸಂಸ್ಥೆಯಾಗಿರುವ ಸಿಐಎಂಎ ಮೂರು ಸುತ್ತುಗಳಲ್ಲಿ ಸ್ಪರ್ಧೆಯನ್ನು ನಡೆಸಿತ್ತು. ಜುಲೈನಲ್ಲಿ ನಡೆದ ಮೊದಲನೇ ಸುತ್ತಿನಲ್ಲಿ ಸ್ಪರ್ಧಿಗಳು ಕೇಸ್ ಸ್ಟಡಿಯೊಂದನ್ನು ಅಧ್ಯಯನ ನಡೆಸಿ ಅದಕ್ಕೆ ಮ್ಯಾನೇಜ್‌ಮೆಂಟ್ ಅಕೌಂಟಿಂಗ್ ಮೂಲಕ ಪರಿಹಾರ ಕಂಡುಹುಡುಕಬೇಕಾಗಿತ್ತು. ಕೊನೆಯ ಸುತ್ತಿನಲ್ಲಿ ತಾವು ನಡೆಸಿದ ಅಧ್ಯಯನದ ಸಂಪೂರ್ಣ ಮಾಹಿತಿಯನ್ನು ಸ್ಪರ್ಧಿಗಳು ವಿವರಿಸಿ ಹೇಳಬೇಕಾಗಿತ್ತು. ಉತ್ತಮ ನಿರ್ವಹಣೆ ಪ್ರದರ್ಶಿಸಿದ ಅತ್ಯುತ್ತಮ ತಂಡವನ್ನು ವಿಜೇತ ತಂಡವಾಗಿ ಆರಿಸಲಾಯಿತು.